ವಿಷಯ: ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಹಣ ಮಂಜೂರು ಕುರಿತು.

2805 (4086)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವ ಉದ್ದೇಶಗಳಿಗಾಗಿ (ಖಾಯಿಲೆ ಳನಾಹುತ) ಹಣ ಮಂಜೂರು ಮಾಡಲಾಗುತ್ತದೆ? (ಮಂಜೂರು ಮಾಡುವ ಉದ್ದೇಶದ ಪೂರ್ಣ ವಿವರ ನೀಡುವುದು).

ಆ) ಈ ಮಂಜೂರಾತಿ ಪ್ರಕ್ರಿಯೆಯ ನೀತಿ ನಿಯಮಗಳು ವಿಧಿ ವಿಧಾನಗಳು ಏನು?

ಇ) ಈ ಪರಿಹಾರ ಧನವನ್ನು ಪಡೆಯಲು ಅರ್ಹರಾದವರು ಯಾರು?

ಈ) ಗರಿಷ್ಠ ಎಷ್ಟು ಮೊತ್ತವನ್ನು ಈಗ ಪರಿಹಾರ ನಿಧಿಯಿಂದ ಮಂಜೂರು ಮಾಡಲಾಗುವುದು.

ಶ್ರೀ ಜೆ.ಹೆಚ್.ಪಟೀಲ್ (ಮುಖ್ಯಮಂತ್ರಿಗಳು):

ಅ) ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪ್ರಮುಖವಾಗಿ ಮೂತ್ರಪಿಂಡ ಖಾಯಿಲೆ, ಕ್ಯಾನ್ಸರ್ ಖಾಯಿಲೆ ಮತ್ತು ಹೃದಯ ಶಸ್ತ್ರ ಚಿಕಿತ್ಸೆ ಖಾಯಿಲೆಗಳಿಗೆ ಧನ ಸಹಾಯ ಮಂಜೂರು ಮಾಡಲಾಗುತ್ತದೆ. ಈ ಮೂರು ಖಾಯಿಲೆಗಳಲ್ಲದೆ ಕೆಲವು ವಿಶೇಷ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳ ವಿವೇಚನೆ ಗೊಳಪಟ್ಟು ಇತರೆ ಖಾಯಿಲೆಗಳಿಗೂ ಚಿಕಿತ್ಸೆಗೂ ಧನ ಸಹಾಯ ಮಂಜೂರು ಮಾಡಲಾಗುತ್ತದೆ.

ಆ) ಮುಖ್ಯಮಂತ್ರಿಗಳ ಪರಿಹಾರ ನಿಧಿಯು ಮುಖ್ಯಮಂತ್ರಿಗಳ ವಿವೇಚನೆಗೊಳಪಟ್ಟ ನಿಧಿಯಾಗಿದ್ದು ಪರಿಹಾರ ನಿಧಿಯಲ್ಲಿ ಲಭ್ಯತೆ ಇರುವ ಹಣವನ್ನು ಗಮನದಲ್ಲಿಟ್ಟುಕೊಂಡು ಧನ ಸಹಾಯ ಮಂಜೂರು ಮಾಡಲಾಗುವುದು.

ಇ) ಮೂತ್ರ ಪಿಂಡ, ಹೃದಯ ಮತ್ತು ಕ್ಯಾನ್ಸರ್ ಖಾಯಿಲೆಗಳಿಂದ ನರಳುತ್ತಿರುವ ಬಡ ರೋಗಿಗಳು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಲ್ಲಿ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿರುವ ದಾಖಲಾತಿಗಳನ್ನು ಗಮನಿಸಿ ಧನ ಸಹಾಯ ನೀಡಲಾಗುವುದು.

ಈ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಲಭ್ಯವಿರುವ ಹಣವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಖಾಯಿಲೆಯ ತೀವ್ರತೆಯನ್ನು ಗಮನಿಸಿ ಧನ ಸಹಾಯ ಮಂಜೂರು ಮಾಡಲಾಗುವುದು.